## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** **ಶ್ರೀ ಕೆ.ಓ ಜಾನಕೀರಾಮ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ** ಇವರ ವಿರುದ್ಧದ ಶಿಸ್ತು ಕ್ರಮದ-ಅಂತಿಮ ಆದೇಶ.

**ಓದಲಾಗಿದೆ:** 1) ಸರ್ಕಾರದ ಕಾರಣ ಕೇಳುವ ನೋಟೀಸ್ ದಿನಾಂಕ:22.04.2022.

2) ಶ್ರೀ ಕೆ.ಓ.ಜಾನಕೀರಾಮ್ ಇವರ ಲಿಖಿತ ಸಮಜಾಯಿಷಿ ದಿ:30.04.2022.

****

**ಪ್ರಸ್ತಾವನೆ:-**

ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ-2021ರ ನಿಯಮ-23ರನ್ವಯ ಪ್ರತಿಯೊಬ್ಬ ಸರ್ಕಾರಿ ನೌಕರನು ಆಯಾ ವರ್ಷದ ಆಸ್ತಿ-ದಾಯಿತ್ವ ವಿವರಗಳನ್ನು ಆಯಾ ಆರ್ಥಿಕ ವರ್ಷ ಪೂರ್ಣಗೊಂಡ ನಂತರ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಆದರೆ, **ಶ್ರೀ ಕೆ.ಓ ಜಾನಕೀರಾಮ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ** ಇವರು ಸದರಿ ನಿಯಮವನ್ನು ಉಲ್ಲಂಘಿಸಿ **2014 ರಿಂದ 2021ನೇ ಸಾಲಿನ ಆಸ್ತಿ-ದಾಯಿತ್ವ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸದೇ ಇದ್ದುದರಿಂದ ಮತ್ತು 2014 ರಿಂದ 2016ನೇ ಸಾಲಿನ** ಆಸ್ತಿ ಹೊಣೆಗಾರಿಕೆ ವಿವರಗಳನ್ನು ಸಲ್ಲಿಸುವಂತೆ **ದಿ:04.08.2016 ಮತ್ತು 26.09.2017ರ** ಸರ್ಕಾರದ ನೋಟೀಸ್‌ಗಳಲ್ಲಿ ಸೂಚಿಸಿದ್ದರೂ ಸಹ ಸರ್ಕಾರಕ್ಕೆ ಯಾವುದೇ ವಿವರಣೆ/ಮಾಹಿತಿ ಸಲ್ಲಿಸದೇ ಬೇಜವಾಬ್ದಾರಿತನದಿಂದ ವರ್ತಿಸಿ ಕರ್ತವ್ಯಲೋಪವೆಸಗಿದ್ದರಿಂದ ಇವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ನಿರ್ಧರಿಸಿ **ಕರ್ನಾಟಕ ನಾಗರೀಕ ಸೇವಾ(ವ.ನಿ&ಮೇ) ನಿಯಮಾವಳಿಗಳು-1957 ರ ನಿಯಮ-12(1)(ಎ) ರಡಿಯಲ್ಲಿ** ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಿ ಸದರಿ ತಿಳುವಳಿಕೆ ಪತ್ರ ತಲುಪಿದ **15 ದಿನಗಳ** ಒಳಗಾಗಿ ಪ್ರತಿರಕ್ಷಣಾ ಹೇಳಿಕೆ/ ಲಿಖಿತ ಅಹವಾಲನ್ನು ಸಲ್ಲಿಸುವಂತೆ ಹಾಗೂ ನಿಗದಿತ ಅವಧಿಯಲ್ಲಿ ಯಾವುದೇ ರಕ್ಷಣಾತ್ಮಕ ಹೇಳಿಕೆ/ಲಿಖಿತ ಸಮಜಾಯಿಷಿ ಸರ್ಕಾರಕ್ಕೆ ಸ್ವೀಕೃತವಾಗದೇ ಇದ್ದಲ್ಲಿ ಸದರಿ ಆರೋಪಗಳ ಕುರಿತು ಸದರಿ ಅಧಿಕಾರಿಯು ಹೇಳುವುದು ಏನೂ ಇಲ್ಲವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಾವಳಿಗಳು-1957ರನ್ವಯ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು **ಮೇಲೆ ಓದಲಾದ ಕ್ರಮ ಸಂಖ್ಯೆ:01** ರ ನೋಟೀಸಿನಲ್ಲಿ ಸೂಚಿಸಲಾಗಿತ್ತು.

ಸದರಿ ಕಾರಣ ಕೇಳುವ ನೋಟೀಸಿಗೆ ಆಪಾದಿತ ಅಧಿಕಾರಿಯು ಸರ್ಕಾರಕ್ಕೆ ಸಲ್ಲಿಸಿರುವ **ಮೇಲೆ ಓದಲಾದ ಕ್ರಮ ಸಂಖ್ಯೆ:02ರ** ಲಿಖಿತ ಸಮಜಾಯಿಷಿಯಲ್ಲಿ ಈ ಕೆಳಕಂಡಂತೆ ಲಿಖಿತ ಹೇಳಿಕೆ ಸಲ್ಲಿಸುತ್ತಾ, ತಮ್ಮ ವಿರುದ್ಧದ ದೋಷಾರೋಪಗಳಿಂದ ತಮ್ಮನ್ನು ಆರೋಪಮುಕ್ತಗೊಳಿಸುವಂತೆ ಕೋರಿರುತ್ತಾರೆ.

- **ದಿ:04.08.2016ರಂದು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ನೋಟೀಸನ್ನು ಜಾರಿಗೊಳಿಸಲಾಗಿರುತ್ತದೆ. ಆದರೆ, ಸದರಿ ಅವಧಿಯಲ್ಲಿ ತಾವು ಅಮಾನತ್ತಿನಲ್ಲಿರುವುದರಿಂದ ವಿಳಾಸದ ಅಲಭ್ಯತೆಯಿಂದ ನೋಟೀಸನ್ನು ಸ್ವೀಕರಿಸಿರುವುದಿಲ್ಲ.**
- **ದಿ:26.09.2017ರಂದು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ನೋಟೀಸನ್ನು ಜಾರಿಗೊಳಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 130 ಪಬವ 2017, ದಿ:07.07.2017ರನ್ವಯ ತಾಲ್ಲೂಕು ಪಂಚಾಯಿತಿ, ಜಗಳೂರು ಹುದ್ದೆಯ ಪ್ರಭಾರವನ್ನು ದಿ:10.07.2017ರಂದು ವಹಿಸಿಕೊಂಡಿರುತ್ತೇನೆ. ಆದರೆ ಸದರಿ ನೋಟೀಸನ್ನು ಸ್ವೀಕರಿಸಿರುವುದಿಲ್ಲ.**
- **ಪ್ರಸ್ತುತ 2014 ರಿಂದ 2021ನೇ ಸಾಲಿನವರೆಗಿನ ಆಸ್ತಿದಾಯಿತ್ವದ ವಿವರಗಳನ್ನು ಸಲ್ಲಿಸಿದ್ದು, ಈ ವಿವರಗಳನ್ನು ಅಂಗೀಕರಿಸಿ ಟಿಪ್ಪಣಿ ಮಾಡಿಕೊಳ್ಳಲು ಕೋರಿರುತ್ತಾರೆ.**

ಆಪಾದಿತ ಅಧಿಕಾರಿಯು ಸರ್ಕಾರಕ್ಕೆ ಸಲ್ಲಿಸಿರುವ ಲಿಖಿತ ಸಮಜಾಯಿಷಿಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಸದರಿ ಅಧಿಕಾರಿಯು ತಾಲ್ಲೂಕು ಪಂಚಾಯಿತಿ, ಕೂಡ್ಲಗಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೂಡ್ಲಗಿ ತಾಲ್ಲೂಕಿನ ಗುಂಡುಮುಣುಗು ಗ್ರಾಮ ಪಂಚಾಯಿತಿಯ 14ನೇ ಹಣಕಾಸು ಯೋಜನೆಯಡಿ ನಿಗದಿಪಡಿಸಿದ 2ನೇ ಕಂತಿನ ಸಾಮಾನ್ಯ ಮೂಲ ಅನುದಾನದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಸದರಿ ಅಧಿಕಾರಿಯು ಅಕ್ರಮ ಸಂಭಾವನೆ ಸ್ವೀಕರಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ **ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 159 ವಿಸೇಬಿ 2016, ದಿ:17.09.2016**ರಲ್ಲಿ ಸದರಿಯವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಸದರಿಯವರನ್ನು ಅಮಾನತ್ತುಗೊಳಿಸಲಾಗಿರುತ್ತದೆ. ತದನಂತರ ಸದರಿಯವರ ಮನವಿಯನ್ನು ಕೂಲಂಕಶವಾಗಿ ಪರಿಶೀಲಿಸಿ **ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 159 ವಿಸೇಬಿ 2016 ದಿ:04.07.2017**ರಲ್ಲಿ ಸದರಿಯವರ ವಿರುದ್ಧದ ಇಲಾಖೆ ವಿಚಾರಣೆ ಬಾಕಿ ಇರಿಸಿ ಅವರ ಅಮಾನತ್ತನ್ನು ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿರುತ್ತದೆ. ಸದರಿ ಅಂಶಗಳ ಹಿನ್ನೆಲೆಯಲ್ಲಿ **ದಿ:04.08.2016**ರಂದು ಸರ್ಕಾರದಿಂದ ಜಾರಿಗೊಳಿಸಿರುವ ನೋಟೀಸ್ ವಿಳಾಸದ ಅಲಭ್ಯತೆಯಿಂದ ಅಧಿಕಾರಿಗೆ ತಲುಪದೇ ಇರುವುದನ್ನು ಒಪ್ಪಬಹುದಾಗಿದೆ. **ದಿ:26.09.2017ರಂದು ಸದರಿ ಆರೋಪಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ನೋಟೀಸನ್ನು ಜಾರಿಗೊಳಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 130 ಪಬವ 2017, ದಿ:07.07.2017ರನ್ವಯ ತಾಲ್ಲೂಕು ಪಂಚಾಯಿತಿ, ಜಗಳೂರು ಹುದ್ದೆಗೆ ವರ್ಗಾವಣೆಗೊಳಿಸಿದ್ದು, ಅದರಂತೆ ದಿ:10.07.2017ರಂದು ಸದರಿ ಹುದ್ದೆಯ ಪ್ರಭಾರವಹಿಸಿಕೊಂಡಿರುವ ವಾಸ್ತವಾಂಶದ ಹಿನ್ನೆಲೆಯಲ್ಲಿ ಸದರಿ ನೋಟೀಸು ಅಧಿಕಾರಿಗೆ ತಲುಪದೇ ಇರುವುದನ್ನು ಒಪ್ಪಬಹುದಾಗಿದೆ. ಮುಂದುವರೆದು, ಸದರಿ ಅಧಿಕಾರಿಯು ಪ್ರಸ್ತುತ 2014 ರಿಂದ 2021ನೇ ಸಾಲಿನವರೆಗಿನ ಆಸ್ತಿದಾಯಿತ್ವ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, **ಶ್ರೀ ಕೆ.ಓ ಜಾನಕೀರಾಮ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ** ಇವರು ಸರ್ಕಾರಕ್ಕೆ ಸಲ್ಲಿಸಿರುವ ಲಿಖಿತ ವಿವರಣೆಯನ್ನು ಒಪ್ಪಿ ಸದರಿಯವರನ್ನು **ದಿನಾಂಕ:22.04.2022ರಂದು ಸರ್ಕಾರದಿಂದ ಜಾರಿಗೊಳಿಸಿದ ದೋಷಾರೋಪಣಾ ಪಟ್ಟಿಯಲ್ಲಿನ ಆರೋಪಗಳಿಂದ ಆರೋಪಮುಕ್ತಗೊಳಿಸಲು** ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 289 ಎಪಿಆರ್, ಬೆಂಗಳೂರು, ದಿನಾಂಕ:10.06.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಕೆ.ಓ ಜಾನಕೀರಾಮ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ** ಇವರಿಗೆ ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಗಳ-1957 ನಿಯಮ-12ರಡಿ **ದಿನಾಂಕ:22.04.2022ರಂದು** ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ದೋಷಾರೋಪಣಾ ಪಟ್ಟಿಯಲ್ಲಿನ ಆರೋಪಗಳಿಂದ ಆರೋಪ ಮುಕ್ತಗೊಳಿಸಿ ಆದೇಶಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

10/06/2022
(ಬಾಲಪ್ಪ)
**ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.**

**ಇವರಿಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

GO's

2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ ಜಿಲ್ಲೆ.
3) ಶ್ರೀ ಕೆ.ಓ ಜಾನಕೀರಾಮ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮೊಳಕಾಲ್ಮೂರು.
4) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
5) ಮಾಹಿತಿ ಕೇಂದ್ರ/ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಉಪ ಕಾರ್ಯದರ್ಶಿ(ಆಡಳಿತ-2) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

GO's